ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆ

2635 (3343) ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಆ) ಪ್ಯಾಕೇಜ್ 2 ರಲ್ಲಿ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗಳನ್ನು ಯಾವಾಗ ಪ್ರಾರಂಭವಾಗಿದೆ? ಮತ್ತು ಅವುಗಳನ್ನು ಪೂರ್ಣಗೊಳಿಸಲು ಎಷ್ಟು ಸಮಯ ನಿಗಧಿಪಡಿಸಲಾಗಿತ್ತು?

ಇ) ಇವುಗಳ ಗುತ್ತಿಗೆದಾರರು ಇತ್ತೀಚೆಗೆ ಈ ಯೋಜನೆಗಳಿಗೆ ಬೀಗ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು? ಮತ್ತು ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ) ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆಗಳನ್ನು ಫೆಬ್ರವರಿ 2001ಕ್ಕೆ ಮೂಲ ವಿನ್ಯಾಸದಂತೆ ಈಗಾಗಲೇ ಮುಗಿಸಲಾಗಿದೆ. ಆದರೆ ಕೆಲವಡೆ ಜಲಮೂಲ ಬದಲಿಯಾಗಿರುವುದರಿಂದ ಹೆಚ್ಚುವರಿ ಕಾಮಗಾರಿಗಳು ಅವಶ್ಯವಿದ್ದು ಅವು ಮುಕ್ತಾಯ ಹಂತದಲ್ಲಿದೆ. ಬಾಕಿ ಇರುವ ಎಲ್ಲಾ ಕೆಲಸಗಳನ್ನು ಸೆಪ್ಟೆಂಬರ್ 2001ರೊಳಗಾಗಿ ಮುಗಿಸಲಾಗುವುದು.

ಆ) ಪ್ಯಾಕೇಜ್ 2 (20 ಹಳ್ಳಿಗಳು) ರಲ್ಲಿ ಕೈಗೊಳ್ಳಲಾದ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು 15-5-1997 ರಂದು ಪ್ರಾರಂಭಿಸಲಾಗಿದೆ. ಸದರೀ ಯೋಜನೆಗಳನ್ನು ಮುಗಿಸಲು 31 ತಿಂಗಳ ಸಮಯ ನಿಗದಿಗೊಳಿಸಲಾಗಿತ್ತು.

ಇ) ಪ್ಯಾಕೇಜ್ 2 ರಲ್ಲಿ ಕೈಗೊಳ್ಳಲಾಗಿರುವ ಕುಡಿಯುವ ನೀರಿನ ಯೋಜನೆಗಳನ್ನು ಪ್ಯಾಕೇಜ್ 2ಎ ಮತ್ತು 2ಬಿ ಎಂದು ವಿಂಗಡಿಸಿ ಗುತ್ತಿಗೆಗಳನ್ನು ನೀಡಲಾಗಿದೆ. ಈ ಯೋಜನೆಗಳು ಬಹುಗ್ರಾಮ ಯೋಜನೆಗಳಾಗಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೬೧(ಬಿ)೩ ರ ಅನ್ವಯ ಈ ಯೋಜನೆಗಳ ಉಸ್ತುವಾರಿ ಹಾಗೂ

ನಿರ್ವಹಣೆಗಳನ್ನು ಯೋಜನಾ ಮಟ್ಟದ ಸಮಿತಿಗಳಿಗೆ ವಹಿಸುವುದು ಅಗತ್ಯವಿದ್ದು ಸಮಿತಿಗಳನ್ನು ರಚಿಸುವವರಿಗೆ ಈ ಯೋಜನೆಯನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್‌ರವರು ವಹಿಸಿಕೊಳ್ಳುವಂತೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ 236 ಪಿಪಿಎಂ 99, ದಿನಾಂಕ 21.12.2000 ರಲ್ಲಿ ಸೂಚಿಸಲಾಗಿದೆ.

ಪ್ಯಾಕೇಜ್ 2ಬಿ ರಲ್ಲಿ ತೆಗೆದುಕೊಂಡಿರುವ ಕುಡಿಯುವ ನೀರು ಸರಬರಾಜು ಯೋಜನೆಯು ಮೊರಬ ಗೊಂಚಲಿನಲ್ಲಿ (6 ಗ್ರಾಮಗಳನ್ನು) ಹಾಗೂ ಶಿಶುನಹಳ್ಳಿ ಗೊಂಚಲಿನಲ್ಲಿ (5 ಗ್ರಾಮಗಳನ್ನು) ಒಳಗೊಂಡಿದ್ದು ಈ ಗುತ್ತಿಗೆಯನ್ನು ಮೆ. ರಾವ್ ಕನ್ಸ್‌ಟ್ರಕ್ಷನ್, ಬೆಂಗಳೂರು ಇವರಿಗೆ ವಹಿಸಲಾಗಿತ್ತು. ಸದರಿ ಯೋಜನೆಯಡಿ ಕೆಲಸ ಮುಗಿದಿದ್ದು ನಿಯಮಿತವಾಗಿ ನೀರನ್ನು ಸಹಾಲಕ್ಕೆ ಗ್ರಾಮಸ್ಥರಿಗೆ ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಗಳನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್‌ಗಳಿಗೆ ಇನ್ನೂ ಹಸ್ತಾಂತರಿಸಬೇಕಾಗಿದೆ.

ಪ್ಯಾಕೇಜ್ 2ಎ ರಲ್ಲಿ ತೆಗೆದುಕೊಂಡಿರುವ ಕುಡಿಯುವ ನೀರಿನ ಯೋಜನೆಯ ಅರೆಕುರಹಟ್ಟಿಯ ಗೊಂಚಲಿನಲ್ಲಿ (6 ಗ್ರಾಮಗಳಲ್ಲಿ) ಬನಹಟ್ಟಿ ಗೊಂಚಲಿನಲ್ಲಿ (5 ಗ್ರಾಮಗಳು) ಹಾಗೂ ಭೈರನಹಟ್ಟಿ ಗ್ರಾಮಗಳು ಸೇರಿದ್ದು ಕಾಮಗಾರಿಗಳ ನಿರ್ವಾಹಣೆಯನ್ನು ಮೆ. ಹರ್ವಿನ್ಸ್ ಕನ್ಸ್‌ಟ್ರಕ್ಷನ್ ಹೈದರಾಬಾದ್ ಇವರಿಗೆ ವಹಿಸಲಾಗಿದೆ. ಯೋಜನೆಗಳು ಕಾರ್ಯಾರಂಭವಾಗಿವೆ.

ಪ್ಯಾಕೇಜ್ 2ಎ ಕ್ಕೆ ಸಂಬಂಧಪಟ್ಟ 12 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಗುತ್ತಿಗೆದಾರರು ಬೀಗ ಹಾಕಿದ್ದು ಸತ್ಯ. ಗುತ್ತಿಗೆದಾರರು ಆರ್ಥಿಕ ಮುಗ್ಗಟ್ಟು ಕಾರಣದಿಂದಾಗಿ ನೀರು ಸರಬರಾಜು ನಿರ್ವಹಣೆ ಮಾಡಲು ಸಾಧ್ಯವಿಲ್ಲವೆಂದು ದಿನಾಂಕ: 16-6-2001 ರಂದು ಮನವಿ ಸಲ್ಲಿಸಿರುತ್ತಾರೆ. ಸೂಚಿಸಿದ ಎರಡು ಮೂರು ದಿನಗಳಲ್ಲಿ ಯೋಜನೆಯನ್ನು ಹಸ್ತಾಂತರಿಸುವುದಾಗಿ ತಿಳಿಸಿದ್ದು ಮತ್ತು ಯಾವುದಾದರೂ ನ್ಯೂನ್ಯತೆಗಳು ಇದ್ದಲ್ಲಿ ಹಸ್ತಾಂತರಿಸುವ ಸಮಯದಲ್ಲಿ ಸರಿಪಡಿಸುವುದಾಗಿ ತಿಳಿಸಿರುತ್ತಾರೆ.

ಸರ್ಕಾರವು ದಿನಾಂಕ: 15-6-2001ರಂದು ಜಿಲ್ಲಾ ಪಂಚಾಯತ್‌ರವರುಗಳಿಗೆ ಪತ್ರ ಬರೆದು ಕುಡಿಯುವ ನೀರಿನ ಯೋಜನೆಯನ್ನು ವಹಿಸಿಕೊಳ್ಳುವಂತೆ ಪುನ: ತಿಳಿಸಲಾಗಿದೆ. ಇದರ ಪ್ರಯತ್ನ ಈಗಾಗಲೇ ಜಿಲ್ಲಾ ಪಂಚಾಯತ್‌ರವರು ತಾಲ್ಲೂಕು ನಿರ್ವಾಹಣಾಧಿಕಾರಿಗಳಿಗೆ ಯೋಜನೆಗಳನ್ನು ವಹಿಸಿಕೊಳ್ಳುವಂತೆ ನಿರ್ದೇಶನ ಮಾಡಿರುತ್ತಾರೆ.

ಈ ಮಧ್ಯೆ ಅವಶ್ಯವಿರುವ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವಂತೆ ಗುತ್ತಿಗೆದಾರರ ಪ್ರತಿನಿಧಿ ಸಮಕ್ಷಮ ಕ್ರಮ ಜರುಗಿಸಿದ ಪರಿಣಾಮವಾಗಿ ನವಲಗುಂದ ತಾಲ್ಲೂಕಿನ ಅರೆಕುರಹಟ್ಟಿ, ಬೆಲಕವಾಡ, ಹಾಗೂ ಕಾಲವಾಡ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಪುನ: ಪ್ರಾರಂಭಿಸಲಾಗಿದೆ.

ಬನಹಟ್ಟಿ ಮತ್ತು ಭೈರನಹಳ್ಳಿ ಗ್ರಾಮಸ್ಥರು ತಮ್ಮ ಕೆರೆಯಲ್ಲಿ ನೀರಿನ ಸಂಗ್ರಹಣ ಕಡಿಮೆ ಇರುವುದರಿಂದ ಶುದ್ಧೀಕರಣ ಘಟಕಕ್ಕೆ ನೀರು ಬಿಡಲು ಒಪ್ಪುತ್ತಿಲ್ಲ. ಆದಾಗ್ಯೂ ನೀರಿನ ಅತೀ ಸಮಸ್ಯೆಯಿರುವ ಸುರಕೋಡ ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವದಕ್ಕೋಸ್ಕರ ಏರು ಕೊಳವೆ ರಿಪೇರಿ ಕಾರ್ಯ ಕೈಕೊಳ್ಳಲಾಗಿದೆ.

ಬನಹಟ್ಟಿ ಹಾಗೂ ಭೈರನಹಟ್ಟಿ ಗ್ರಾಮಸ್ಥರಿಗೆ ಮನ ಒಲಿಸಿ ಅಲ್ಲಿಯ ಶುದ್ಧೀಕರಣ ಘಟಕಕ್ಕೆ ನೀರು ಬಿಡುವುದರೊಂದಿಗೆ ಎಲ್ಲಾ ಗ್ರಾಮಗಳಿಗೆ ನೀರು ಒದಗಿಸುವ ಕಾರ್ಯ ಪ್ರಾರಂಭಿಸಲು ಪ್ರಯತ್ನಿಸಲಾಗುತ್ತಿದೆ.

ರಾಜ್ಯದಲ್ಲಿ ಗ್ರಾಮಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ

2636 (3344) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧. ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಪ್ರಸ್ತಾವನೆ ಸರಕಾರದ ಮಟ್ಟದಲ್ಲಿದೆಯೇ;

೨. ಪಂಚಾಯಿತಿ ಮಟ್ಟದಲ್ಲಿ ಇರುವ ಅಧಿಕಾರಗಳ ಮೇಲೆ ನಿಯಂತ್ರಣದ ಅಧಿಕಾರ ಪಂಚಾಯತಿಗಳಿಗೆ ನೀಡಲಾಗುವುದೆ?

೩. ಗ್ರಾಮೀಣ ಮಟ್ಟದಲ್ಲಿ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ಇಲಾಖೆಗೆ ನೀಡುವ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾಗಿದೆಯೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

೧. ಹೌದು ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವ ಸಲುವಾಗಿ ಅಧ್ಯಯನ ಮಾಡಲು ವರ್ಕಿಂಗ್ ಗ್ರೂಪ್‌ನ್ನು ರಚಿಸಲಾಗಿದೆ.